# ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ದಂಡಾಧಿಕಾರಿಗಳು, ಶಹಾಬಾದ

**CC.No.674/2023**

ಕರ್ನಾಟಕ ಸರ್ಕಾರ

........ಫಿರ್ಯಾದಿದಾರ

- ವಿರುದ್ಧ -

ಭೀಮಾಬಾಯಿ ಗಂಡ ಹಾಜಪ್ಪ

.........ಆರೋಪಿ

ನಾನು ಚಟ್ನಿ ಪ್ರಶಾಂತ ಶರಣಬಸವೇಶ್ವರ ಬಿ.ಎ, ಎಲ್‌ಎಲ್.ಬಿ.(ಆನರ್ಸ),ಎಲ್.ಎಲ್.ಎಂ, ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ದಂಡಾಧಿಕಾರಿಗಳು, ಶಹಾಬಾದ ಇವರಿಂದ ಈ ಕೆಳಗಿನಂತೆ ನೀವು ಆಪಾದನೆಗೆ ಒಳ್ಳಪಡುತ್ತೀರಿ.

## ದೋಷಾರೋಪಣೆ

ಮೊದಲನೇಯದಾಗಿ ದಿ: 07/04/2022 ರಂದು ಬೆಳಗಿನ 8.00 ರ ಸುಮಾರಿಗೆ ಅಬಕಾರಿ ಜಂಟಿ ಆಯುಕ್ತ ಕಲಬುರಗಿ ವಿಭಾಗ ಆದೇಶದ ಮೇರೆಗೆ ಅಬಕಾರಿ ನಿರೀಕ್ಷಕರು ಉಪ ವಿಭಾಗ ಚಿತ್ತಾಪೂರ ಇವರು ದಾಳಿಗೆ ಹೋಗಿದ್ದು, ಸದರಿ ದಾಳಿ ಮಾಡುವ ಸಮಯದಲ್ಲಿ ಶಹಾಬಾದ ತಾಲೂಕಿನ ಬೆಟ್ಟಿ ಏರಿಯಾದಲ್ಲಿ ಆರೋಪಿತಳಾದ ನೀನು ಭೀಮಾಬಾಯಿ ಗಂಡ ಹಾಜಪ್ಪ ಎಂಬುವಳು ಮನೆ ಮೇಲೆ ದಾಳಿ ಮಾಡಿದಾಗ, ಸದರಿ ಆರೋಪಿತಳಾದ ನಿನ್ನ ಮನೆಯಲ್ಲಿ ಒಂದು ಪ್ಲಾಸ್ಟಿಕ ಚೀಲದಲ್ಲಿ ಒಂದು ಲೀಟರ ಸಾಮರ್ಥ್ಯ ಉಳ್ಳ 50 ಪ್ಲಾಸ್ಟಿಕ ಬಾಟಲಿಗಳಲ್ಲಿ ಒಟ್ಟು 50 ಲೀಟರನಷ್ಟು ಕಲಬೆರಕೆ ಸೇಂದಿ ಮಾರಾಟ ಮಾಡುವ ಉದ್ದೇಶಕ್ಕಾಗಿ ಸಂಗ್ರಹಿಸಿದ್ದು ಕಂಡುಬಂದಿತ್ತು. ಸದರಿ ದ್ರವ್ಯವನ್ನು ಕರ್ನಾಟಕ ಅಬಕಾರಿ ಕಾಯ್ದೆ 1965 ರಡಿಯಲ್ಲಿ ಯಾವುದೇ ಯೋಗ್ಯವಾದ ಪರವಾನಗಿಯನ್ನು ಪಡೆಯದೇ ನಿಯಮಗಳನ್ನು ಉಲ್ಲಂಘನೆ ಮಾಡಿ ನಿನ್ನ ತಾಬೆಯಲ್ಲಿಟ್ಟುಕೊಂಡಿದ್ದು, ಈ ಮೂಲಕ ಆರೋಪಿತರಳಾದ ನೀನು ಸದರಿ ಕಾಯ್ದೆ ಕಲಂ.13, 14, 15, 32 ಮತ್ತು 38 (ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ.

ಸದರಿ ಅಪರಾಧಗಳು ನಮ್ಮ ನ್ಯಾಯಾಲಯದ ಸಂಜ್ಞೆಯಲ್ಲಿ ಬರುವುದರಿಂದ ನಿಮ್ಮನ್ನು ವಿಚಾರಣೆಗೆ ಒಳಪಡಿಸುತ್ತೇನೆ ಅಂತಾ ತಿಳಿಯಪಡಿಸುತ್ತೇನೆ.

ಪ್ರಶ್ನೆಃ ಈ ಮೇಲಿನ ಅಪರಾಧದ ಸಾರಾಂಶ ನಿಮಗೆ ತಿಳಿಯಿತೆ?

ಉತ್ತರಃ

ಪ್ರಶ್ನೆಃ ಈ ಮೇಲಿನ ದೋಷರೋಪಣೆಯನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೊ?

ಉತ್ತರಃ

( ಆರೋಪಿಗಳಿಗೆ ದೋಷರೋಪಣೆಯ ಆಪಾದನೆಯ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಇಂದು ನನ್ನ ಸಮಕ್ಷಮ ಓದಿ ಹೇಳಿ ವ ಕೇಳಿ ಅವರು ಕೊಟ್ಟ ಉತ್ತರವನ್ನು ನಮೂದಿಸಿಕೊಳ್ಳಲಾಗಿದೆ .)

ಓ. ಹೇ. ಕೇ. ಸರಿ ಅದೆ.

Sd/-

ದಿನಾಂಕಃ 06/06/2025

ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ದಂಡಾಧಿಕಾರಿಗಳು, ಶಹಾಬಾದ